ನಿಯಂತ್ರಿತ ಮಾರುಕಟ್ಟೆಗಳ ಕಾರ್ಯಾಚರಣೆ

೬೨೮ (೨೧೬೯) ಶ್ರೀ ಯು. ಭೂಪತಿ(ಸಂಡೂರು) ಮಾನ್ಯ ಧಾರ್ಮಿಕ ಹಾಗೂ ದತ್ತಿ ನಿಯಂತ್ರಿತ ಮಾರುಕಟ್ಟೆ ಮತ್ತು ಮಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ನಿಯಂತ್ರಿತ ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು, ಇದಕ್ಕೆ ಹಣಕಾಸಿನ ಮೂಲವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಆ ಪೈಕಿ ಕಾರ್ಯಾಚರಣೆ ಮಾಡುತ್ತಿರುವ ಮತ್ತು ಮಾಡುತ್ತಿಲ್ಲದಿರುವ ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆ ಎಷ್ಟೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಸದರಿ ಮಾರುಕಟ್ಟೆಗಳಲ್ಲಿ ಹಣ ದುರುಪಯೋಗ ಮಾಡುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು, ಆ ಬಗ್ಗೆ ದಾಖಲಾಗಿರುವ ಮೊಕದ್ದಮೆಗಳೆಷ್ಟು ? ಶಿಕ್ಷೆಸಿರುವ ಅಪರಾಧಿಗಳು ಎಷ್ಟು ?

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ನಿಯಂತ್ರಿತ ಮಾರುಕಟ್ಟೆ ಮತ್ತು ಮಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ನಿಯಂತ್ರಿತ ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಒಟ್ಟು ೪೮.೦೮ ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಇದಕ್ಕಾಗಿ ಕೇಂದ್ರ ಧನ ಸಹಾಯದಿಂದ ೪.೪೭ ಕೋಟಿ ರೂ. ಗಳು, ಒಂದಿದೆ ಮತ್ತು ಗ್ರಾಮೀಣ ಗೋದಾಮುಗಳ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದಿಂದ ರೂ. ೮೦ ಕೋಟಿ ಹಾಗೂ ರಾಜ್ಯ ಮಾರಾಟ ಮಂಡಳಿಯಿಂದ ರೂ. ೬೩ ಕೋಟಿ ಧನ ಸಹಾಯ ಬಂದಿದೆ. ಉಳಿದ ಹಣವನ್ನು ಮಾರುಕಟ್ಟೆ ಸಮಿತಿಗಳು ತಮ್ಮ ಉಳಿತಾಯ ವಿಧಿಯಿಂದ ಖರ್ಚು ಮಾಡಿವೆ. ಸಮಿತಿಗಳು ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಜಿಲ್ಲಾವಾರು ವಿವರ ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದಿಸಿದೆ.

ಆ) ರಾಜ್ಯದಲ್ಲಿ ೧೧೬ ಮಾರುಕಟ್ಟೆ ಸಮಿತಿಗಳಿದ್ದು ಈ ಎಲ್ಲವೂ ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ ೭೬ ಮಾರುಕಟ್ಟೆ ಸಮಿತಿಗಳು ತಮ್ಮ ಸ್ವಂತ ಜಮೀನಿನಲ್ಲಿ ಪ್ರಾಂಗಣಗಳನ್ನು ಅಭಿವೃದ್ಧಿಪಡಿಸಿದ್ದು ನಿಯಂತ್ರಿತ ಕೃಷಿ ಉತ್ಪನ್ನಗಳ ವ್ಯಾಪಾರವನ್ನು ಸ್ಥಳಾಂತರಿಸಿವೆ. ಉಳಿದ ೩೧ ಮಾರುಕಟ್ಟೆ ಸಮಿತಿಗಳು ಸ್ವಂತ ಜಮೀನನ್ನು ಹೊಂದಿದ್ದು ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಂಡಿವೆ. ಉಳಿದ ೯ ಮಾರುಕಟ್ಟೆ ಸಮಿತಿಗಳಿಗೆ ಸ್ವಂತ ಜಮೀನು ಇಲ್ಲದಿರುವುದರಿಂದ ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿದೆ, (ಜಿಲ್ಲಾವಾರು ವಿವರಗಳನ್ನು ನೀಡಲಾಗಿದೆ)

ಇ) ೧೧೬ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಪೈಕಿ ೧೫ ಮಾರುಕಟ್ಟೆ ಸಮಿತಿಗಳಲ್ಲಿ ೨೨ ಹಣದ ದುರುಪಯೋಗದ ಪ್ರಕರಣಗಳು ಬೆಳಕಿಗೆ ಬಂದಿರುತ್ತವೆ. ಹಣದ ದುರುಪಯೋಗದ ಕಾರಣ ೨೨ ಸಮಿತಿ ನೌಕರರನ್ನು ಹಾಗೂ ೬ ಸರ್ಕಾರಿ ನೌಕರರನ್ನು ಸರ್ಕಾರಿ ಸೇವೆಯಿಂದ ಖಾಯಂ ವಾಗಿ ನಿವೃತ್ತಿಗೊಳಿಸಲಾಗಿದೆ.

ಮೂರುಕಟ್ಟೆಗಳಲ್ಲಿ ಅಭಿವೃದ್ಧಿ ಕೆಲಸಗಳಿಗಾಗಿ ಖರ್ಚು ಮಾಡಿರುವ ಮೊತ್ತ ಜಿಲ್ಲಾವಾರು

ಕ್ರಮ ಸಂಖ್ಯೆ	ಜಿಲ್ಲೆಗಳು	ಖರ್ಚು ಮಾಡಿರುವ ಹಣ (ರೂ. ಲಕ್ಷಗಳಲ್ಲಿ)
೧.	ಬೆಂಗಳೂರು	೩೬೪.೦೮
೨.	ಕೋಲಾರ	೧೦೩.೪೫
೩.	ಚಿತ್ರದುರ್ಗ	೩೮೯.೮೧
೪.	ಶಿವಮೊಗ್ಗ	೩೪೨.೭೪
೫.	ತುಮಕೂರು	೩೭೯.೯೬
೬.	ಮೈಸೂರು	೨೦೮.೬೯
೭.	ಮಂಡ್ಯ	೮೩.೪೪
೮.	ಚಿಕ್ಕಮಗಳೂರು	೧೦೩.೬೨
೯.	ದಕ್ಷಿಣ ಕನ್ನಡ	೧೫೫.೮೦
೧೦.	ಕೊಡಗು	೧೬.೪೦
೧೧.	ಹಾಸನ	೧೯೬.೬೭
೧೨.	ಬಳ್ಳಾರಿ	೧೫೬.೧೮
೧೩.	ಬೀದರ್	೧೧೦.೪೬
೧೪.	ಗುಲ್ಬರ್ಗಾ	೨೭೧.೮೮
೧೫.	ರಾಯಚೂರು	೩೪೮.೪೮
೧೬.	ಬೆಳಗಾಂ	೪೧೧.೦೫
೧೭.	ಉತ್ತರ ಕನ್ನಡ	೧೮೯.೩೭
೧೮.	ಧಾರವಾಡ	೭೭೮.೪೬
೧೯.	ಬಿಜಾಪುರ	೧೯೮.೭೩
		೪೯೦೪.೨೭

ಅನುಬಂಧ–೧

ಮಾರಾಟ ವ್ಯವಹಾರ ಸ್ಥಳಾಂತರದ ಸಂಕ್ಷಿಪ್ತ ತಃಪ್ತೆ:

೧)	ಸ್ವಂತ ಮಾರುಕಟ್ಟೆಯ ಪ್ರಾಂಗಣಗಳಿಗೆ ವ್ಯಾಪಾರವನ್ನು ಸ್ಥಳಾಂತರಿಸಿದ ಮಾರುಕಟ್ಟೆ ಸಮಿತಿಗಳ ಪಟ್ಟಿ.	೭೬
೨)	ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿ ಪಡಿಸಲು ಸ್ವಂತ ಭೂಮಿಯನ್ನು ಹೊಂದಿದ್ದು ಅಭಿವೃದ್ಧಿ ಪಡಿಸಬೇಕಾದ ಹಾಗೂ ಅಭಿವೃದ್ಧಿ ಪಡಿಸಿದ ಹೊಸ ಪ್ರಾಂಗಣಗಳನ್ನು ಘೋಷಿಸ ಬೇಕಾದ ಮಾರುಕಟ್ಟೆಗಳ ಪಟ್ಟಿ.	೩೧
೩)	ಸ್ವಂತ ಮಾರುಕಟ್ಟೆ ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಲು ಭೂಮಿ ಇಲ್ಲದಿರುವ ಮಾರುಕಟ್ಟೆಗಳ ಪಟ್ಟಿ.	೯
	ಒಟ್ಟು	೧೧೬

ಅನುಬಂಧ–೧

ಸ್ವಂತ ಮಾರುಕಟ್ಟೆಯ ಪ್ರಾಂಗಣಗಳಿಗೆ ವ್ಯಾಪಾರವನ್ನು ಸ್ಥಳಾಂತರಿಸಿದ ಮಾರುಕಟ್ಟೆ ಸಮಿತಿಗಳ ಪಟ್ಟಿ:

	ಬೆಂಗಳೂರು ವಿಭಾಗ		ಮಾರುಕಟ್ಟೆ ಪ್ರಾಂಗಣದ ವಿಸ್ತೀರ್ಣ
			ಎ. ಗು.
ಬೆಂಗಳೂರು ಜಿಲ್ಲೆ	೧	ಬೆಂಗಳೂರು	೮೨.೦೦
ಕೋಲಾರ ಜಿಲ್ಲೆ	೨	ಚಿಂತಾಮಣಿ	೨೫.೩೧½
	೩	ಬಂಗಾರಪೇಟೆ	೪೦.೨೦
	೪	ಚಿಕ್ಕಬಳ್ಳಾಪುರ	೨೮.೩೧
	೫	ಮುಳಬಾಗಿಲು	೨೩.೨೯
ತುಮಕೂರು ಜಿಲ್ಲೆ	೬	ಮಧುಗಿರಿ	೧೦.೧೮
	೭	ತಿಪಟೂರು	೬೧.೧೬½
	೮	ಶಿರಾ	೭.೪
	೯	ತುಮಕೂರು	೪೭.೩೭
	೧೦	ಕಂಣಿಗಲ್	೧೬.೧೯
ಚಿತ್ರದುರ್ಗ ಜಿಲ್ಲೆ	೧೧	ಚಿತ್ರದುರ್ಗ	೧೦೦.೨೫
	೧೨	ಚಳ್ಳಕೆರೆ	೫೯.೧೬
	೧೩	ದಾವಣಗೆರೆ	೨೨೨.೦೦
	೧೪	ಹರಿಹರ	೧೪.೨೯
	೧೫	ಹೊಸದುರ್ಗ (೧೦.೬—೧೩.೨೯)	೨೩.೩೫
	೧೬	ಹಿರಿಯೂರು	೩೧.೨೭
	೧೭	ಶಿವಮೊಗ್ಗ	೬೩.೧೪
	೧೮	ಸಾಗರ	೫೪.೩೮

ಮೈಸೂರು ವಿಭಾಗ

ಮೈಸೂರು ಜಿಲ್ಲೆ	೧೯	ಮೈಸೂರು	೧೨.೦೦
			೩.೨೫
	೨೦	ಚಾಮರಾಜನಗರ	೧೫.೨೫
	೨೧	ಕೊಳ್ಳೇಗಾಲ	೨೬.೬೭
	೨೨	ನಂಜನಗೂಡು	೧೮.೦೮
ಚಿಕ್ಕಮಗಳೂರು ಜಿಲ್ಲೆ	೨೩	ಕಡೂರು	೪೪.೩೭
	೨೪	ತರೀಕೆರೆ	೨೩.೩೦
ಹಾಸನ ಜಿಲ್ಲೆ	೨೫	ಹಾಸನ	೩೦.೨೦
	೨೬	ಅರಸೀಕೆರೆ	೨೯.೨೩
	೨೭	ಚನ್ನರಾಯಪಟ್ಟಣ	೧೫.೦೬
	೨೮	ಹೊಳೇನರಸೀಪುರ	೨೧.೨೦
ಬೆಳಗಾವಿ ಜಿಲ್ಲೆ	೨೯	ಬೆಳಗಾವಿ	೮.೨೩
	೩೦	ಅಥಣಿ	೧೧.೧೨
	೩೧	ಬೈಲಹೊಂಗಲ	೪೨.೩೧
	೩೨	ಗೋಕಾಕ್	೧೧೬.೩೧
	೩೩	ಕುಡಚಿ	೬.೬½
	೩೪	ರಾಮದುರ್ಗ	೧೫.೧೮
	೩೫	ಸೌಂದತ್ತಿ	೪೨.೦೦
	೩೬	ಸಂಕೇಶ್ವರ	೧೭.೩೮
ಬಿಜಾಪುರ ಜಿಲ್ಲೆ	೩೭	ಬಿಜಾಪುರ	೫೨.೩೪
	೩೮	ಜಮಖಂಡಿ	೨೮.೩೭
	೩೯	ಮಹಾಲಿಂಗಪುರ	೨೭.೨೬
	೪೦	ತಾಳೀಕೋಟೆ	೨೮.೨೮
ಧಾರವಾಡ ಜಿಲ್ಲೆ	೪೧	ಧಾರವಾಡ	೧೧.೩೦
	೪೨	ಅಣ್ಣಿಗೇರಿ	೨೫.೦೪
	೪೩	ಬ್ಯಾಡಗಿ	೬೦.೩೮
	೪೪	ಗದಗ	೧೫೨.೦೦
	೪೫	ಹಾವೇರಿ	೬೨.೩೩
		(೩೭.೧೧–೨೫.೨೨)	
	೪೬	ಹಿರೇಕೆರೂರು	೧೨.೧೯
	೪೭	ಹುಬ್ಬಳ್ಳಿ(ಅಮರಗೋಳ)	೪೨೧.೪
	೪೮	ನರಗುಂದ	೧೦೨.೦೦
		(೧೫.೧೯–೮೬.೨೧)	
	೪೯	ಕುಂದಗೋಳ	೨೩.೨೦
	೫೦	ಲಕ್ಷ್ಮೇಶ್ವರ	೧೮.೨೪
	೫೧	ಮುಂದರಗಿ(೫.೭–೧೮.೨೯)	೨೩.೩೬
	೫೨	ಹೊಳೆಆಲೂರು(ರೋಣ)	೧೨.೧೩
	೫೩	ರಾಣೆಬೆನ್ನೂರು	೬೪.೦೨
	೫೪	ಸವಣೂರು	೮.೧೮
ಉತ್ತರ ಕನ್ನಡ	೫೫	ಕುಮಟಾ	೧೬.೩೦
	೫೬	ಯಲ್ಲಾಪುರ	೧೫.೦೦
	೫೭	ಸಿರಸಿ	೩೧.೨೯
	೫೮	ಶಿರಾಲಿ	೧೭.೦೮

ಗುಲ್ಬರ್ಗಾ ವಿಭಾಗ

ಬಳ್ಳಾರಿ ಜಿಲ್ಲೆ	೫೯	ಬಳ್ಳಾರಿ	೧೦೪.೦೦
	೬೦	ಕೊಟ್ಟೂರು	೧೫.೬೦
	೬೧	ಹೊಸಪೇಟೆ	೨೪.೯೭
	೬೨	ಹಗರಿಬೊಮ್ಮನಹಳ್ಳಿ	೮.೯೫
	೬೩	ಶಿರಗುಪ್ಪ	೨೦.೧೧
ಬೀದರ್ ಜಿಲ್ಲೆ	೬೪	ಬೀದರ್	೫೯.೨೮
	೬೫	ಹುಮ್ನಾಬಾದ್	೧೭.೩೭
	೬೬	ಬಸವಕಲ್ಯಾಣ	೧೬.೦೮
ರಾಯಚೂರು ಜಿಲ್ಲೆ	೬೭	ರಾಯಚೂರು	೭೨.೦೩
	೬೮	ಗಂಗಾವತಿ	೪೦.೦೭
	೬೯	ಕೊಪ್ಪಳ	೩೨.೩೨
	೭೦	ಕುಷ್ಟಗಿ	೨೨.೦೭
	೭೧	ಸಿಂಧನೂರು	೩೬.೦೦
	೭೨	ಮಾನ್ವಿ	೩೩.೧೮
ಗುಲ್ಬರ್ಗಾ ಜಿಲ್ಲೆ	೭೩	ಗುಲ್ಬರ್ಗಾ	೬೫.೦೦
	೭೪	ಶಹಾಪುರ	೫೬.೧೪
	೭೫	ಯಾದಗಿರಿ	೭೬.೩೦
	೭೬	ಸೇಡಂ	೩೧.೧೬

ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿ ಪಡಿಸಲು ಸ್ವಂತ ಜಮೀನನ್ನು ಹೊಂದಿದ್ದು

ಮಾರಾಟ ವ್ಯವಹಾರವನ್ನು ಸ್ಥಳಾಂತರಿಸಲು ಇನ್ನೂ ಅಭಿವೃದ್ಧಿ ಪಡಿಸಬೇಕಾದ

ಮಾರುಕಟ್ಟೆ ಸಮಿತಿಗಳ ಪಟ್ಟಿ:

		ಬೆಂಗಳೂರು ವಿಭಾಗ	ಎಕರೆ ಗುಂಟೆ
ತುಮಕೂರು ಜಿಲ್ಲೆ	೧	ಹುಳಿಯಾರು	೩.೩೫
	೨	ಗುಬ್ಬಿ	೫.೩೨
	೩	ಪಾವಗಡ	೨೩.೨೫
	೪	ಚಿಕ್ಕನಾಯ್ಕನಹಳ್ಳಿ	೨೨.೦೦
	೫	ತುರುವೇಕೆರೆ	೭.೩೮
ಬೆಂಗಳೂರು ಜಿಲ್ಲೆ	೬	ಚನ್ನಪಟ್ಟಣ	೧೫.೦೦
ಶಿವಮೊಗ್ಗ ಜಿಲ್ಲೆ	೭	ಶಿಕಾರಿಪುರ	೩೫.೩೮
	೮	ಭದ್ರಾವತಿ	೨೩.೩೩
	೯	ಹೊನ್ನಾಳಿ	೨೬.೩೨
	೧೦	ಚನ್ನಗಿರಿ	೧೪.೨೪
		ಮೈಸೂರು ವಿಭಾಗ	
ಮೈಸೂರು ಜಿಲ್ಲೆ	೧೧	ಕೃಷ್ಣರಾಜನಗರ	೩೨.೩೭
	೧೨	ಹುಣಸೂರು	೧೪.೦೦
ದಕ್ಷಿಣ ಕನ್ನಡ ಜಿಲ್ಲೆ	೧೩	ಮಂಗಳೂರು	೪೫.೮೮
ಕೊಡಗು ಜಿಲ್ಲೆ	೧೪	ಗೋಣಿಕೊಪ್ಪಲ್	೧೦.೦೦
	೧೫	ಕುಶಾಲನಗರ	೧೧.೦೬
	೧೬	ಮಡಿಕೇರಿ	೪.೦೨
ಹಾಸನ ಜಿಲ್ಲೆ	೧೭	ಸಕಲೇಶಪುರ	೧೦.೦೦

ಮಂಡ್ಯ ಜಿಲ್ಲೆ	೧೮	ಮಂಡ್ಯ	೧೭.೧೧

ಬೆಳಗಾವಿ ವಿಭಾಗ

ಬೆಳಗಾವಿ ವಿಭಾಗ	೧೯	ನಿಪ್ಪಾಣಿ	೭೦.೩೦
	೨೦	ನಂದಗಡ	೫.೨೩
ಬಿಜಾಪುರ ಜಿಲ್ಲೆ	೨೧	ಬಾದಾಮಿ	೩೨.೦೯
	೨೨	ಹುನಗುಂದ	೨೪.೦೪
ಧಾರವಾಡ ಜಿಲ್ಲೆ	೨೩	ನಂದಗಡ ಹಾನಗಲ್	೧೭.೦೬
ಉತ್ತರ ಕನ್ನಡ ಜಿಲ್ಲೆ	೨೪	ಹಳಿಯಾಳ	೧೫.೩೫

ಗುಲ್ಬರ್ಗಾ ವಿಭಾಗ

ಬೀದರ್ ಜಿಲ್ಲೆ	೨೫	ಔರಾದ್	೪೧.೧೧
	೨೬	ಬಾಲ್ಕಿ	೩೬.೨೭
ರಾಯಚೂರು ಜಿಲ್ಲೆ	೨೭	ಯಲಬುರ್ಗಾ	೨೦.೧೫
ಗುಲ್ಬರ್ಗಾ ಜಿಲ್ಲೆ	೨೮	ಚಿಂಚೋಳಿ	೨೧.೧೦
	೨೯	ಶಹಾಬಾದ್	೨೦.೦೦
	೩೦	ಶೋರಾಪುರ	೨೫.೩೭
	೩೧	ಸೈದಾಪುರ	೧೨.೩೨

ಮಾರುಕಟ್ಟೆ ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಲು ಸ್ವಂತ ಜಮೀನು ಇಲ್ಲದಿರುವ ಮಾರುಕಟ್ಟೆ ಸಮಿತಿಗಳ ಪಟ್ಟಿ:

ಬೆಂಗಳೂರು ವಿಭಾಗ

ಕೋಲಾರ ಜಿಲ್ಲೆ	೧	ಗೌರಿಬಿದನೂರು (೧೬.೧೨ ಸ್ವಾಧೀನಪಡಿಸಿಕೊಳ್ಳಲು ಕ್ರಮ ಜರುಗಿಸಿದೆ)
	೨	ಕೋಲಾರ
	೩	ಶ್ರೀನಿವಾಸಪುರ
	೪	ಮಾಲೂರು
ಬೆಂಗಳೂರು ಜಿಲ್ಲೆ	೫	ದೊಡ್ಡಬಳ್ಳಾಪುರ (೨೦.೧೧ ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಜರುಗಿದೆ)

ಬೆಳಗಾಂ ವಿಭಾಗ

ಬಿಜಾಪುರ ಜಿಲ್ಲೆ	೬	ಬಾಗಲಕೋಟೆ (ಒಟ್ಟು ೧೬.೦೦ ಎಕರೆ ಇದೆ. ಆದರೆ ಬಾಗಲಕೋಟೆ ಮುಳುಗಡೆಯ ಕಾರಣ ಅಭಿವೃದ್ಧಿ ಪಡಿಸಿಲ್ಲ)
ಉತ್ತರ ಕನ್ನಡ ಜಿಲ್ಲೆ	೭	ಹೊನ್ನಾವರ
	೮	ಕಾರವಾರ

ಗುಲ್ಬರ್ಗಾ ವಿಭಾಗ

ಗುಲ್ಬರ್ಗಾ ಜಿಲ್ಲೆ	೯	ನಲವಾರ

ಅನುಬಂಧ-೨

ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಪ್ರಾರಂಭವಾದ ಮುಖ್ಯ ಮಾರುಕಟ್ಟೆಗಳ ಹಾಗೂ ಉಪ ಮಾರುಕಟ್ಟೆಗಳನ್ನು ತೋರಿಸುವ ತಃಖ್ತೆ.

ಹೊಸದಾಗಿ ಸ್ಥಾಪಿತವಾದ ಮುಖ್ಯ ಮಾರುಕಟ್ಟೆಗಳು			ಹೊಸದಾಗಿ ಸ್ಥಾಪಿತವಾದ ಉಪ ಮಾರುಕಟ್ಟೆಗಳು			
ಕ್ರಮಸಂಖ್ಯೆ	ಮಾರುಕಟ್ಟೆಯ ಹೆಸರು	ಜಿಲ್ಲೆಕ	ಕ್ರಮಸಂಖ್ಯೆ	ಉಪಮಾರುಕಟ್ಟೆಯ ಹೆಸರು	ಯಾವ ಮಾರುಕಟ್ಟೆ ಸಮಿತಿಗೆ ಸಂಬಂಧಪಟ್ಟಿದೆ.	ಜಿಲ್ಲೆ
೧	೨	೩	೧	೨	೩	೪
				೧೯೮೫-೮೬		
	ಇಲ್ಲ		೧.	ಖಾನಾಪುರ (ಎಸ್. ಹೆಚ್)	ಶೋರಾಪುರ	ಗುಲ್ಬರ್ಗಾ
			೨.	ಜಾಲಹಾಲ	ಬಾದಾಮಿ	ಬಿಜಾಪುರ
			೩.	ಕೊನ್ನೂರು	ನರಗುಂದ	ಧಾರವಾಡ
			೪.	ಹೆಗ್ಗಡದೇವನಕೋಟೆ	ನಂಜನಗೂಡು	ಮೈಸೂರು
				೧೯೮೬-೮೭		
೧.	ಹೊನ್ನಾಳಿ	ಶಿವಮೊಗ್ಗ	೫.	ಅಲಗವಾಡಿ	ನರಗುಂದ	ಧಾರವಾಡ
೨.	ಶ್ರೀನಿವಾಸಪುರ	ಕೋಲಾರ	೬.	ಹೆಬ್ಬಾಳ	ನರಗುಂದ	ಧಾರವಾಡ
			೭.	ಮೊರಬ	ಧಾರವಾಡ	ಧಾರವಾಡ
			೮.	ಖರ್ಜಗಿ	ಹಾವೇರಿ	ಧಾರವಾಡ
			೯.	ಮೊಟೇಬೆನ್ನೂರು	ಬ್ಯಾಡಗಿ	ಧಾರವಾಡ
			೧೦.	ಮರಿಯಮ್ಮನಹಳ್ಳಿ	ಹೊಸಪೇಟೆ	ಬಳ್ಳಾರಿ
			೧೧.	ರಾಣಾಕುಸನೂರು	ಔರಾದ್	ಬೀದರ್
			೧೨.	ಕವಿತಾಳ	ಮಾನ್ವಿ	ರಾಯಚೂರು
			೧೩.	ಬೀರೂರು	ಕಡೂರು	ಚಿಕ್ಕಮಗಳೂರು
			೧೪.	ಅಂತರಗಟ್ಟಿ	ಕಡೂರು	ಚಿಕ್ಕಮಗಳೂರು
			೧೫.	ಕೊರಟಗೆರೆ	ತುಮಕೂರು	ತುಮಕೂರು

೩.	ಮಹಾಲಿಂಗಪುರ	ಬಿಜಾಪುರ	೧೬. ಕುರ್ತಕೋಟಿ	ಗದಗ	ಧಾರವಾಡ
			೧೭. ದೊಂಬಳಗಾವಮ	ಗದಗ	ಧಾರವಾಡ
			೧೮. ಕೋಟಿವು ಪಾಚಗಿ	ಗದಗ	ಧಾರವಾಡ
			೧೯. ಶಲವಡಿ	ನರಗುಂದ	ಧಾರವಾಡ
			೨೦. ತುಮ್ಮಿನಕಟ್ಟಿ	ರಾಣೆಬೆನ್ನೂರು	ಧಾರವಾಡ
			೨೧. ಉಗರಗೋಳ	ಸೌಂದತ್ತಿ	ಬೆಳಗಾಂಪ
			೨೨. ಬ್ಯಾಲ್ಯಾ	ಮಧುಗಿರಿ	ತುಮಕೂರು
			೨೩. ಬಡವನಹಳ್ಳಿ	ಮಧುಗಿರಿ	ತುಮಕೂರು
			೨೪. ಚಂದ್ರಭಾವಿ	ಮಧುಗಿರಿ	ತುಮಕೂರು
			೨೫. ಕೋಣನೂರು	ಹೊಳೇನರಸೀಪುರ	ಹಾಸನ
			೨೬. ಮಲ್ಲಿಪಟ್ಟಣ	ಹೊಳೇನರಸೀಪುರ	ಹಾಸನ
			೨೭. ಶಿವನಿ	ತರೀಕೆರೆ	ಚಿಕ್ಕಮಗಳೂರು
			೨೮. ಹುಲಿಕೆಪ್ಪುರ	ಮೂಡ್ಡಿ	ರಾಯಚೂರು.

(ಮಾನ್ಯ ಶ್ರೀ ಭೂಪತಿಯವರ ಪರವಾಗಿ ಶ್ರೀ ಪಂಪಾಪತಿಯವರು ಪಶ್ನೆಯನ್ನು ಕೇಳಿದರು.)

ಶ್ರೀ ಪಂಪಾಪತಿ.—ಅಧ್ಯಕ್ಷರೇ, ೧೫೬ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಪೈಕಿ ೧೫ ಮಾರುಕಟ್ಟೆ ಸಮಿತಿಗಳಲ್ಲಿ ಹಣದ ದುರಪಯೋಗದ ೨೬ ಪ್ರಕರಣಗಳು ಬೆಳಕಿಗೆ ಬಂದಿರುತ್ತವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ೧೫ ಮಾರುಕಟ್ಟೆ ಸಮಿತಿಗಳಲ್ಲಿ ಯಾವ ರೀತಿ ಹಣ ದುರುಪಯೋಗವಾಗಿದೆ ಹಾಗೂ ಇವುಗಳಲ್ಲಿ ಯಾವ ಮಾರುಕಟ್ಟೆ ಸಮಿತಿಗಳು ಎಂದು ಹೇಳಬೇಕು. ಮತ್ತು ಅಲ್ಲಿದ್ದ ನೌಕರರುಗಳಲ್ಲಿ ಕೆಲವರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆಯೆಂದು ಹೇಳಿದ್ದೀರಿ. ಆಗಿದ್ದರೆ ಅವರ ಹೆಸರುಗಳನ್ನು ಹೇಳುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಅಧ್ಯಕ್ಷರೇ, ಯಾದ್ಗಿರ್‌ನಲ್ಲಿ ೧, ಪ್ರಕರಣ, ಸಿಂಧನೂರಿನಲ್ಲಿ ೫, ಶಹಾಪುರದಲ್ಲಿ ೧, ಮುಂಡರಗಿಯಲ್ಲಿ ೧, ಗುಂಡ್ಲಪೇಟೆಯಲ್ಲಿ ೨, ಹುನಗುಂದ್‌ದಲ್ಲಿ ೧, ಚಿಂತಾಮಣಿಯಲ್ಲಿ ೨, ಅರಸೀಕೆರೆಯಲ್ಲಿ ೧, ಮೈಸೂರಿನಲ್ಲಿ ೧, ಹೊಸದುರ್ಗದಲ್ಲಿ ೧, ಚನ್ನಗಿರಿಯಲ್ಲಿ ೨, ಚಾಮರಾಜನಗರದಲ್ಲಿ ೧, ಬಂಗಾರಪೇಟೆಯಲ್ಲಿ ೧, ದಾವಣಗೆರೆಯಲ್ಲಿ ೧, ಹಾಗೂ ಬ್ಯಾಡಗಿಯಲ್ಲಿ ೧, ಪ್ರಕರಣ ಎಂದರೆ ಒಟ್ಟು ೨೨ ಪ್ರಕರಣಗಳಲ್ಲಿ ಹಣದ ದುರುಪಯೋಗ ಆಗಿದ್ದು ಇದರ ಒಟ್ಟು ಮೊತ್ತ ೧,೦೩,೩೪೧ ರೂಪಾಯಿ ೫೮ ಪೈಸೆಗಳು ಆಗಿರುತ್ತದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಕೆಲವರನ್ನು ನಿವೃತ್ತಿಗೊಳಿಸಲಾಗಿದೆ ಎಂದಿದ್ದಾರೆ. ಇದರಿಂದ ಆ ಹಣವನ್ನು ವಾಪಸ್ಸು ಪಡೆದಿದ್ದೀರಿ ? ಜೊತೆಗೆ ಕೆಲವು ಮಾರುಕಟ್ಟೆ ಸಮಿತಿಗಳಲ್ಲಿ ಏನು ಹೆಚ್ಚು ಹಣ ಸಂಗ್ರಹ ಆಗುತ್ತದೆ ಆ ಹಣವನ್ನು ಅಲ್ಲಿಯ ರೈತರ ಅನುಕೂಲಕ್ಕಾಗಿ ಉಪಯೋಗ ಮಾಡುತ್ತೀರಾ ಅಥವಾ ಈ ಹಣ ಬೇರೆ ಕಡೆ ಉಪಯೋಗ ಆಗುತ್ತಿದೆಯೇ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಅಲ್ಲಿ ಕೆಲವೊಬ್ಬರಿಂದ ಹಣವನ್ನು ವಸೂಲಿ ಮಾಡಿರುತ್ತಾರೆ. ಅಲ್ಲಿ ರೈತರಿಂದ ಬಂದಿರುವ ಹಣವನ್ನು ಅಲ್ಲಿಯೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿದ್ದೇವೆ.

ಶ್ರೀ ಪಂಪಾಪತಿ.—ದಾವಣಗೆರೆ ಮಾರುಕಟ್ಟೆಯಲ್ಲಿ ಹೆಚ್ಚು ಹಣ ಸಂಗ್ರಹವಾಗುತ್ತಿದೆ. ಆದರೆ ಬೇರೆ ಕಡೆ ಉಪಯೋಗಕ್ಕೆ ಸರ್ಕಾರ ಈ ಹಣವನ್ನು ಬಳಸುತ್ತಿದೆ ಎಂದು ತಿಳಿದು ಬಂದಿದೆ. ಆ ಹಣವನ್ನು ಅಲ್ಲಿರತಕ್ಕ ರೈತರು ಬೆಳದ ಬೆಳೆಗಳನ್ನು ಮಾರುಕಟ್ಟೆಗೆ ತರುವುದಕ್ಕೆ ಬೇಕಾದ ಸರಿಯಾದ ರಸ್ತೆಯ ಅಭಿವೃದ್ಧಿಗೆ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಈ ಹಣವನ್ನು ರಸ್ತೆ ದುರಸ್ತಿಗೆ ಉಪಯೋಗ ಮಾಡುವುದಕ್ಕೆ ಸೂಚನೆ ಮಾಡುತ್ತೀರಾ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಈ ಬಗ್ಗೆ ಸಂಪೂರ್ಣ ಮಾಹಿತಿ ನನ್ನಲ್ಲಿ ಇಲ್ಲ. ಆ ಮಾಹಿತಿಯನ್ನು ತರಿಸಿ ತಮಗೆ ವಿಷಯವನ್ನು ತಿಳಿಸುತ್ತೇನೆ.

ಹೊನ್ನಾವರ ತಾಲ್ಲೂಕಿನ ಪಾವಿನಕರ್ವೆಯಲ್ಲಿ ಸಮುದ್ರ ಕೊರೆತದಿಂದ ಉಂಟಾಗುವ ಅನಾಹುತದ ಕುರಿತು

೯೨೯ (೨೬೪೪) ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಕಂದಾಯ ಯೋಜನೆ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಪಾವಿನ ಕರ್ವೆಯಲ್ಲಿ ಸಮುದ್ರ ಕೊರೆತದಿಂದಾಗುವ ಅನಾಹುತದ ಅರಿವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ ಅದರಿಂದಾಗುವ ತೊಂದರೆಯನ್ನು ತಪ್ಪಿಸಲು ಸರ್ಕಾರದವರು ಈ ವರೆಗೆ ಕೈಕೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ ಕಂದಾಯ, (ಯೋಜನೆ ಹಾಗೂ ನೀರಾವರಿ ಮಂತ್ರಿಗಳು).—

ಅ) ಹೌದು.